ಬೆಂಗಳೂರಿನ ಬಸವನಗುಡಿ ದೊಡ್ಡಗಣಪತಿ ದೇವಸ್ಥಾನಕ್ಕೆ ಹೋಗಿದ್ದಾಗ ಆ ಕ್ಷಣದಲ್ಲಿ ವಿನಾಯಕನಿಗೆ ಹೂವಿನಿಂದ ಅಲಂಕರಿಸಿರಲಿಲ್ಲ. ವಿವಸ್ತ್ರದಲ್ಲಿ ಆ ನೈಜ ಕೆತ್ತನೆಯ ಚಿತ್ತಾರ ಕಂಡು 'ಬಂಡೆಯಲ್ಲಿ ಅದೆಷ್ಟು ಸರಳವಾಗಿ ಈ ಮೂರ್ತಿಯನ್ನು ಬಿಡಿಸಿದ್ದಾರೆ' ಎಂದು ನನ್ನ ಹೆಂಡತಿ ಮಂಗಳಳ ಬಳಿ ಹೇಳುತ್ತಿದ್ದೆ. ಪಕ್ಕದಲ್ಲಿ ನಿಂತಿದ್ದ ವಯೋವೃದ್ಧರೊಬ್ಬರು ನನ್ನನ್ನೇ ಕಣ್ಣು ಮಿಟುಕಿಸದೆ ದಿಟ್ಟಿಸುತ್ತ ಮುಖವನ್ನು ಸಿಂಡರಿಸುತ್ತ, 'ರಾಯರೇ, ಇದು ಪ್ರತಿಷ್ಠಾಪನೆ ಮಾಡಿದ ಗಣಪತಿಯಲ್ಲ. ಸ್ವಯಂ ಅವತರಿಸಿದ ಉದ್ಭವಮೂರ್ತಿ' ಎಂದು ಖಡಾಖಂಡಿತವಾಗಿ ಹೇಳಿದರು.

ಯಾವುದೇ ದೇವರ ವಿಗ್ರಹ ಸ್ವಯಂ ಉದ್ಭವಮೂರ್ತಿ ಎನ್ನುವ ತರ್ಕವನ್ನು ಭೂವಿಜ್ಞಾನಿಗಳು ಒಪ್ಪುವುದೇ ಇಲ್ಲ. ಯಾವುದೇ ಶಿಲಾಶಿಲ್ಪಗಳು ನೆಟ್ಟ ಬೀಜಗಳಂತೆ ಮೊಳಕೆಯೊಡೆಯಲು ಸಾಧ್ಯವೇ? ಕಲ್ಲಿನಲ್ಲಿ ಕೆತ್ತಿದ ಕೋಳಿಹುಂಜ ಕೂಗುತ್ತದೆ ಎಂಬ ಅಸಂಗತತೆಯ ಅನಿಸಿಕೆ ಇದ್ದಹಾಗೆ. ಹಾಗಾದರೆ ಸದೃಢ ಅನ್ನಬಹುದಾದ ಅಜರಾಮರ ಎನ್ನಿಸಿದ ಹಿಮಾಲಯ ಪರ್ವತ ಬೆಳೆಯುತ್ತಿದೆಯಲ್ಲ! ಈ ಜಿಜ್ಞಾಸೆಯ ಸಂಶಯಕ್ಕೆ ಭೂಸಂಶೋಧಕರು ಹೇಳುವುದಾದರು ಏನು?

ಗಗನ ಚುಂಬಿಸುವ ಹಿಮಾಲಯವನ್ನು ಅಳೆಯಬೇಕಾದರೆ ಸುಮಾರು 8846 ಮೀಟರ್ ದಾಪುಗಾಲು ಇಡುತ್ತ ಮೇಲೇರಬೇಕು. ಒಂದು ವೇಳೆ ಅದರ ಬೇರಿನ ಬುಡದ ಬುನಾದಿ ತಡಕಬೇಕಾದರೆ 13,269 ಮೀಟರ್ ಪಾತಾಳಕ್ಕೆ ಧುಮುಕಲೇಬೇಕು. ಆಳ, ಎತ್ತರ, ಅಗಲ ಗೊತ್ತಾದ ಮೇಲೆ ಅದರ ಹುಟ್ಟಿನ ಪ್ರವರ ತಿಳಿಯದಿದ್ದರೆ ಹೇಗೆ?



ಹಿಮಾಲಯ ಒಂದು ಒಂಟಿ ಶ್ರೇಣಿಯಲ್ಲ. ಈ ವಿಸ್ಮಯ ತವರಲ್ಲಿ ಪರ್ವತರಾಜರು ಹಲವರು. ಇದು ಜಗತ್ಪ್ರಸಿದ್ಧ ರಮಣೀಯ ನಿಸರ್ಗದ ಮಡಿಲು. ಶ್ರೀಮಂತ ಸೊಬಗಿನ ತವರು. ಎತ್ತರಕ್ಕೆ ಹಬ್ಬಿ ಉಬ್ಬಿರುವ ಇಲ್ಲಿಯ ಗಿರಿಶ್ರೇಣಿಯ ಸಾಮ್ರಾಜ್ಯವೆಲ್ಲ ಒಂದು ಕಾಲದಲ್ಲಿ ಟೆಥಿಸ್ ಸಮುದ್ರದ ತಳವಾಗಿತ್ತೆಂದರೆ ನಂಬಲು ಸಾಧ್ಯವೇ? ಕ್ಷಿತಿಯ ಪ್ರಾಕ್ತನ ರೂಪಕದಲ್ಲಿ ಅದೊಂದು ದ್ಯೋತಕ.

ಹಿಮಾಲಯದ ಹುಟ್ಟಿನ ಗುಟ್ಟನ್ನು ತಿಳಿಯಬೇಕಾದರೆ ಒಗ್ಗೂಡಿದ ಭೂಮಿಯ ಛಿದ್ರತೆ ಮತ್ತು ಪರ್ಯಟನೆ ಬಗ್ಗೆ ಹೇಳಲೇಬೇಕು. ಪೃಥ್ವಿ ಸವೆಸಿದ ಹಾದಿಯಲ್ಲಿ ಹಿಮಾಲಯದ ಜನನ ಒಂದು ಕೌತುಕಮಯ ತಿರುವು. ಅವಿಭಕ್ತ ಭೂಮಂಡಲ ಛಿದ್ರವಾಗಿ ದಿಕ್ಕಾಪಾಲಾಗಿ ಚದುರಿದ್ದು ಒಂದು ಅತ್ಯಂತ ಪ್ರಾಚೀನ ಭೂ ಇತಿಹಾಸ. ಧರೆ ಮೊದಲು ಇಬ್ಭಾಗವಾಗಿ ನಂತರ ಮತ್ತೆ ಮತ್ತೆ ತುಂಡುಗಳಾಗಿ ಹೇಗೆಂದರೆ ಹಾಗೆ ಹರಡಿಹೋಗಿದೆ. ಈ ನಡುಗಡ್ಡೆಗಳು ನಿಂತಲ್ಲೇ ನಿಲಲಾಗದ ಭೂಫಲಕಗಳು. ಏಕೆಂದರೆ ಭೂಮಿಯ ಮೇಲ್ಭಾಗದ ತೊಗಟೆ ಭೂಗರ್ಭದ ಶಾಖದ ಶಿಲಾರಸದ ಮೇಲೆ ತೇಲಾಡುತ್ತದೆ. ಭೂಫಲಕಗಳು ಒಂದಕ್ಕೊಂದು ಡಿಕ್ಕಿ ಹೊಡೆದಾಗ ಸಂಭವಿಸುವ ಅನಾಹುತ ಸುಲಭದಲ್ಲಿ ಊಹಿಸಲು ಸಾಧ್ಯವಿಲ್ಲ. ಎರಡು ಲಾರಿಗಳು ಪರಸ್ಪರ ವಿರುದ್ಧ ದಿಕ್ಕಿನಿಂದ ಡಿಕ್ಕಿ ಹೊಡೆದಾಗ ನುಜ್ಜುಗುಜ್ಜಾಗುತ್ತವೆ; ಹೀಗಿರುವಾಗ, ನಿಸರ್ಗದ ಉದ್ದಗಲ ಗಾತ್ರದ ಭಾರೀ ಭೂಫಲಕಗಳು ಡಿಕ್ಕಿಯಾದಾಗ ಆಘಾತದ ಬಗ್ಗೆ ಊಹಿಸಲು ಸಾಧ್ಯವೇ? ಆಗ ಭೂಮಿಯ ಚಿತ್ತಾರವೇ ಬದಲಾಗುತ್ತದೆ. ಇದ್ದದ್ದು ಇಲ್ಲವಾಗುತ್ತದೆ, ಇಲ್ಲದಿರುವುದು ರೂಪುಗೊಳ್ಳುತ್ತದೆ.

ಭಾರತದ ಭೂಫಲಕ ಯುರೇಶಿಯಾದ ಭೂಫಲಕಕ್ಕೆ ಅಪ್ಪಳಿಸಿದಾಗ ಅದರ ತೀವ್ರತೆ ಹೇಗಿತ್ತೆಂದರೆ, ಅದರ ನಡುವೆ ಇದ್ದ ಟೆಥಿಸ್ ಸಮುದ್ರ ಮುದುರಿ ಹಿಸುಕಿಹೋಗಿತ್ತು. ಒಂದು ಹಾಳೆಯ ಎರಡು ಪಾರ್ಶ್ವದಿಂದ ಒತ್ತಡ ಹಾಕಿ ಒಳಮುಖವಾಗಿ ಒತ್ತಿದಾಗ ಅದು ಸುರುಳಿಸುರುಳಿಯಾಗಿ ಸುತ್ತಿಕೊಳ್ಳುವುದಿಲ್ಲವೇ, ಹಾಗೆ. ಇಡೀ ಟೆಥಿಸ್ ಸಮುದ್ರ ತಳಸಮೇತ ಜಜ್ಜಿಹೋಗಿ ಎತ್ತರಕ್ಕೆ ಬೆಳೆದ ಪರ್ವತಶ್ರೇಣಿಯೇ ಈ ಹಿಮಾಲಯ. ಹಿಮಾಲಯವನ್ನು ಒಂದು ಇಂಚನ್ನೂ ಬಿಡದೆ ತಲಾಶ್ ಮಾಡಿದರೆ ಈ ಜಲಶಿಲೆಯ ಒಳಗೆ ಬಚ್ಚಿಟ್ಟುಕೊಂಡಿರುವುದೇ ಕಪ್ಪೆ ಚಿಪ್ಪು, ಶಂಕು, ಸಮುದ್ರಜೀವಿಗಳ ಅಸ್ಥಿಪಂಜರ.

ಹಿಮಾಲಯ ಅದೇಕೆ ಬೆಳೆಯುತ್ತಿದೆ ಅನ್ನುವುದು ಕುತೂಹಲ ಪ್ರಶ್ನೆ. ಭಾರತ ಅಥವಾ ಟಿಬೆಟ್ ಭೂಫಲಕ ಗುರುತ್ವಾಕರ್ಷಣೆಗೆ ಒಳಗಾಗಿ ಯುರೇಶಿಯಾ ಭೂಫಲಕಕ್ಕೆ ಡಿಕ್ಕಿ ಹೊಡೆಯುವ ಬದಲು ಕೆಳಗೆ ನುಸುಳುತ್ತದೆ. ಈ ಪ್ರಕ್ರಿಯೆ ಸಂಭವಿಸಿದಾಗ ಹಿಮಾಲಯದ ಎತ್ತರ ಹೆಚ್ಚುತ್ತಾಹೋಗುತ್ತದೆ. ಈ ಕ್ರಮವನ್ನು ಬೆಳವಣಿಗೆ ಎನ್ನಲಾಗದು. ಇದೊಂದು ಪ್ರಕೃತಿಯ ಬಲಪ್ರದರ್ಶನದ ಆಯಾಮ.

ಹೌದು, ಖಂಡಗಳು ತುಂಡಾಗಿ ತೆವಳುತ್ತಿವೆಯೆ? ಭೂಮಿಯ ಛಿದ್ರತೆ ಮತ್ತು ಸಂಭಾವ್ಯದ ಪರ್ಯಟನೆ ವಿಮರ್ಶಿಸಲು ಇದೊಂದು ಮುನ್ನುಡಿ. 'ಕ್ಷಮಯಾಧರಿತ್ರಿ' — ಈ ವಿಶೇಷಣವನ್ನು ಬುದ್ಧಿ ತಿಳಿದಾಗಿನಿಂದಲೂ ಕೇಳುತ್ತಾ ಬಂದಿದ್ದೇವೆ. ಆದರೆ, ಈ ನುಡಿವಿಶೇಷಣದ ಕ್ಷಮತೆ ಬಗ್ಗೆ ಅನುಮಾನವೇ ಹೆಚ್ಚು. ಸಮಾಧಾನದಲ್ಲಿ ಧರೆಗಿರುವ ತಾಳ್ಮೆಗೆ ಮತ್ತೊಂದು ಹೋಲಿಕೆಯೇ ಹಡೆದ ತಾಯಿ. ಹೆತ್ತ ತಾಯಿಯ ವಾತ್ಸಲ್ಯದ ಬಗ್ಗೆ ಹೇಳುವುದೇ ಬೇಡ. ಅದು ಅನಂತ. ಅಮ್ಮನ ತರುವಾಯ ಜೀವನಪೂರ್ತಿ ಹೊತ್ತು ಸಲಹುವ ಭೂತಾಯಿಯ ಸಖ್ಯವೂ ಅನನ್ಯ. ಆದರೆ ಮಾತೃಸ್ವರೂಪಿಯಾದ ಪೃಥ್ವಿ ಪೂತನಿಯಾಗುವುದೂ ಸಾಧ್ಯವಿದೆ. ಆಗ ಎಲ್ಲವೂ ತಿರುಗುಮುರುಗು. ಆಸೆಪಟ್ಟು ಅಂದವಾಗಿ ಕಟ್ಟಿದ ಸುಂದರ ಮನೆಯ ಚಾವಣಿ ಕುಸಿದು ತಲೆಯ ಮೇಲೆ ಬಿದ್ದಂತೆ.

ವಿಶ್ವದ ಎಲ್ಲೆಡೆ ನೆಲೆಗಡ್ಡೆಗಳ ಭೂಫಲಕಗಳು ಸದ್ದು ಮಾಡುತ್ತಲೇ ಇವೆ. ಸದ್ದು ಅಂದಮಾತ್ರಕ್ಕೆ ಅದು ಶಬ್ದವಲ್ಲ. ಅದು ನೈಸರ್ಗಿಕ ಪ್ರಚೋದನೆಯ ಘಟೋತ್ಕಚ ಗರ್ಜನೆ. ಒಟ್ಟುಗೂಡಿದ್ದ ತಾಯಿಯ ಮಡಿಲನ್ನು ತುಂಡರಿಸಿಕೊಂಡು ಭೂಮಿಯ ಮತ್ತೊಂದು ತುಣುಕು ಆ ಸ್ಥಳ ತೊರೆದು ಗುಳೆ ಹೋಗುವ ಅವಘಡ. ಇಂತಹ ನೈಸರ್ಗಿಕ ವಿಕೋಪ–ವಿಪ್ಲವ ಭೂಮಿಗೆ ಅಂಟಿದ ನಂಟು.

## ಪೂರ್ವ ಆಫ್ರಿಕಾದಲ್ಲಿ ತುಂಡರಿಸಿದ ನೆಲ

ಒಂದು ದೊಡ್ಡ ಯಂತ್ರದೋಣಿಯಲ್ಲಿ ಪ್ರಯಾಣಿಸುತ್ತಿದ್ದೀರಿ ಎಂದು ಭಾವಿಸಿ. ಮಧ್ಯದಲ್ಲೆಲ್ಲೋ ದೋಣಿಯ ಒಂದು ಭಾಗ ಸೀಳಿ ಯಂತ್ರ ಇರುವ ಭಾಗ ಮುಂದಕ್ಕೆ ಚಲಿಸಿ ಎಲ್ಲಾದರು ನಿಂತುಬಿಟ್ಟರೆ ನಿಮ್ಮ ಮಾನಸಿಕ ಸ್ಥಿತಿ ಹೇಗಿರುತ್ತದೆ? ಹಾಗೆ ದೂರ ಸರಿದ ಭಾಗ ಒಂದೆಡೆ ನಿಲ್ಲುತ್ತದೋ ಮುಳುಗುತ್ತದೋ? ಇತ್ತೀಚೆಗೆ ಹೀಗೆ ಒಂದು ಖಂಡ ತುಂಡಾಗಿ ಅಲೆದಾಟಕ್ಕೆ ಹೊರಡಲು ಸಿದ್ಧವಾಗಿದೆ. ಇದು ಕಂಡುಬಂದಿರುವುದು ಪೂರ್ವ ಆಫ್ರಿಕಾದಲ್ಲಿ.

ಪೂರ್ವ ಆಫ್ರಿಕಾದ ಇಥಿಯೋಪಿಯ ಮತ್ತು ಕೀನ್ಯಾ ನಡುವೆ ಭಾರಿ ಗಾತ್ರದ ಬಿರುಕು ಬಾಯಿಬಿಟ್ಟು ಭೂಮಿಯ ಪ್ರತ್ಯೇಕತೆಯ ಒಂದು ಪ್ರಸಂಗ ನಡೆದಿದೆ. ಒಡಕು ಎಂದರೆ ಅಂತಿಂತಹದಲ್ಲ. ಕತ್ತರಿಯಿಂದ ಒಂದು ಹಾಳೆಯನ್ನು ಸಂಪೂರ್ಣವಾಗಿ ತುಂಡರಿಸುವಂತಹ ಬೇರ್ಪಡೆ. ಲಂಡನ್ ರಾಯಲ್ ಹಾಲೊವೇ ವಿಶ್ವವಿದ್ಯಾಲಯದ ಪ್ರಖ್ಯಾತ ಭೂವಿಜ್ಞಾನಿಗಳು